**ಸಾಕ್ಷಿಯನ್ನು ದಿಃ *20/07/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀ ಎಂಹೆಚಕೆ ವಾದಿ ಪರ ವಕೀಲರಿಂದ.***

ನಾನು ಪದವಿಧರ. 2016 ರಲ್ಲಿ ನನ್ನ ಪದವಿ ಶಿಕ್ಷಣ ಮುಗಿದಿತ್ತು. 2016 ಕ್ಕೆ ನನ್ನ ಪದವಿ ಶಿಕ್ಷಣ ಮುಗಿದು ಮೂರು ವರ್ಷ ಕಳೆದಿತ್ತು. ಆ ಸಮಯದಲ್ಲಿ ನಾನು ನನ್ನ ತಂದೆಯ ಹತ್ತಿರ ಕೆಲಸ ಮಾಡುತ್ತಿದೆ. ನನ್ನ ತಂದೆ ಕಚೇರಿ ತೆರೆದಿದ್ದರು. ನನ್ನ ತಂದೆಯ ಬಳಿ ನಾನು ಒಬ್ಬನೇ ಕೆಲಸಕ್ಕೆ ಇದ್ದೆ.

ಒಂದು ದಿನಕ್ಕೆ 3-4 ಪತ್ರಗಳನ್ನು ನೊಂದಣಿ ಮಾಡಿಸುತ್ತಿದ್ದೇವು. 10 ವರ್ಷದ ಹಿಂದೆ ನಿ.ಡಿ.3 ನ್ನು ಬರೆದಿರುವುದರಿಂದ ಅದರ ನಿಖರವಾದ ಮಾಹಿತಿ ನಿಮಗೆ ಇಲ್ಲ ಎಂದರೆ ಸರಿಯಲ್ಲ.

1 ನೇ ವಾದಿ ಮತ್ತು 4 ನೇ ಪ್ರತಿವಾದಿ ನಿ.ಡಿ.3 ನ್ನು ಬರೆದ ದಿನದಿಂದ ಪರಿಚಯ. 4 ನೇ ಪ್ರತಿವಾದಿಯ ಉದ್ಯೋಗ ಏನೂ ಎಂದು ನನಗೆ ಗೊತ್ತಿಲ್ಲ. ನಿ.ಡಿ.3 ನ್ನು ಬರೆದಿದ್ದಾರೆ ಎನ್ನುವ ದಿನ 4 ನೇ ಪ್ರತಿವಾದಿ ನಮ್ಮ ಬಳಿ ಬಂದಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ16-07-2016 ರಂದು ಭೀಮಸೇನ ನಾಯಕ ಇವರು ತಾನೇ ಹೇಳಿ ಮೃತ್ಯು ಪತ್ರ ಬರೆಯಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.3 ಎ ನನ್ನ ತಂದೆಯ ಸಹಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.3 ಎ ನನ್ನ ತಂದೆಯ ಸಹಿ ಅಲ್ಲ ಮತ್ತು ಭೀಮಸೇನ ಕೊಟ್ಟ ಮಾಹಿತಿ ಮೇರೆಗೆ ನಿ.ಡಿ.3 ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.